ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಕೇಂದ್ರ ಮಂತ್ರಿಯಾದ ಜಾಲಪ್ಪನವರೂ ಸಹ ಬಂದಿದ್ದರು ಎನ್ನುವಂತಹ ಮಾತನ್ನು ಹೇಳಿದರು; ಮಾನ್ಯ ಜಾಲಪ್ಪನವರು ಆ ಮಾತುಕತೆಯಲ್ಲಿ ಭಾಗವಹಿಸಿದ್ದ ಛಾಯಚಿತ್ರವಾಗಲಿ, ಅಥವಾ ಬೇರೆ ಯಾವುದೇ ಸುದ್ದಿ ಪ್ರಕಟವಾಗಿಲ್ಲ ಸರ್ಕಾರ ಈ ವಿಚಾರ ಚರ್ಚೆ ಮಾಡಬೇಕು ಎನ್ನುವುದನ್ನು ತಿರಸ್ಕರಿಸಿ. . .

ಶ್ರೀ ಜೆ.ಎಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ಅವರು ಕೇಂದ್ರದ ಮಂತ್ರಿಗಳಾಗಿ ಅವರಿಗೆ ಏನು ಕೆಲಸ ಇತ್ತೋ ಅವರು ಬಂದಿದ್ದರು. ನಮ್ಮ ಟೆಕ್ಸ್‌ಟೈಲ್ ಮಂತ್ರಿಗಳು ಬಂದಿದ್ದರು ಅವರೂ ಬಂದಿದ್ದರು. ಅವರು ತಮ್ಮ ಕಣ್ಣಿನ ಟ್ರೀಟ್‌ಮೆಂಟ್‌ಗೆ ಬಂದಿದ್ದರು. ಅಲ್ಲಿ ಅವರು ಇರಬೇಕು ಇವರು ಇರಬೇಕು ಎಂದು ಏನೂ ಇರಲಿಲ್ಲ. ನಮ್ಮ ಮಂತ್ರಿಗಳೂ ಇದ್ದರು. ನಾವು ಅವರನ್ನು ಕರೆದೆವು. But he had other engagements. ಏಕೆಂದರೆ ತಪ್ಪಾಗಬಾರದು.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಈ ಒಂದು ಚರ್ಚೆಯನ್ನು ಮಾಡಬೇಕೆಂಬ ಪ್ರಸ್ತಾಪವನ್ನು ತಿರಸ್ಕರಿಸಲ್ಪಟ್ಟಿತು. ಸರ್ಕಾರದ ಪ್ರಯತ್ನದಲ್ಲಿ ನನಗೆ ವಿಶ್ವಾಸವಿದ್ದರೂ ಕೂಡ ವಿರೋಧ-ಪಕ್ಷದವರನ್ನು ಗಣನೆಗೆ ತೆಗೆದುಕೊಂಡಿಲ್ಲ ಎನ್ನುವಂತಹ ವಿಚಾರವನ್ನು ಹೇಳಿ ನಾನು ಸಭೆಯಿಂದ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಿ. ಮುನಿಯಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಸರಿಯಾದ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಲಿಲ್ಲ. ತಾತ್ಕಾಲಿಕವಾದ ಒಪ್ಪಂದವನ್ನು ಮಾಡಿದ್ದೇವೆಂದು ಹೇಳಿದ ಮೇಲೆ ಯಾವುದೇ ರೀತಿಯ ಮಾಹಿತಿಯನ್ನು ನಮಗೆ ಒದಗಿಸದೇ ಮದ್ರಾಸ್‌ನಲ್ಲಿ ನಡೆದ ಮಾತುಕತೆ ಏನು ಎನ್ನುವುದನ್ನು ಸ್ಪಷ್ಟಪಡಿಸಲಿಲ್ಲ. ನಮಗೆ ಪ್ರಧಾನಿಯವರು ಇದ್ದಾರೆ ಎನ್ನುವ ಯಮಪ್ರದರ್ಶನ ನಮ್ಮ ಹತ್ತಿರ ತೋರಿಸುವುದು ಇದ್ದರೆ ನಮ್ಮ ಹತ್ತಿರ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ಭೀಮ ಬಲ ಇದೆ ಎನ್ನುವುದನ್ನು ಸಾಬೀತು ಪಡಿಸಬೇಕಾಗುತ್ತದೆ ಅಷ್ಟೇ ಅಲ್ಲ ಅದನ್ನು ಪ್ರತಿಭಟಿಸಿ ನಾವೂ ಧರಣಿ ಮಾಡುತ್ತೇವೆ

(ಕೆ.ಸಿ.ಪಿ. ಸದಸ್ಯರು ಧರಣಿ ಕುಳಿತರು)

ಪ್ರಕಟಣೆ

ಅಧ್ಯಕ್ಷರು:- ನಾಳೆಯಿಂದ ಸದನವು 9-30 ಗಂಟೆಯಿಂದ ರಾತ್ರಿ 7-30 ಗಂಟೆಯವರೆಗೂ ಸಭೆ ಸೇರುವುದು. ದಿನಾಂಕ 10ನೇ ಆಗಸ್ಟ್ 96ರ ಶನಿವಾರ ಸಹ ಸಭೆ ಸೇರುವುದು. ಎಲ್ಲಾ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವ ಕಾರ್ಯಕಲಾಪವು ದಿನಾಂಕ 12ನೇ ಆಗಸ್ಟ್ 1996ಕ್ಕೆ ಮುಕ್ತಾಯಗೊಳಿಸಲಾಗುವುದು. ಧನವಿನಿಯೋಗ ವಿಧೇಯಕಗಳು ಹಾಗೂ ತೆರಿಗೆ ವಿಧೇ-

ಯಕಗಳು ಹಾಗೂ ಇತರೇ ವಿಧೇಯಕಗಳನ್ನು ದಿನಾಂಕ 13ನೇ ಆಗಸ್ಟ್ ಹಾಗೂ 14ನೇ ಆಗಸ್ಟ್ 1996ರಂದು ತೆಗೆದುಕೊಳ್ಳಲಾಗುವುದು. ಈ ವರದಿಗೆ ಸದನವು ಒಪ್ಪಿಗೆ ನೀಡುತ್ತದೆಂದು ಭಾವಿಸುತ್ತೇನೆ. ಈಗ ಬೇಡಿಕೆಗಳ ಮೇಲಿನ ಉತ್ತರ.

6.20 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್:- ಸದನದಲ್ಲಿ ನಡೆಯುವ ವಿಷಯಗಳು ರೆಕಾರ್ಡ್‌ಗೆ ಹೋಗಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ಪುಟ್ಟಣ್ಣಯ್ಯನವರೇ, ಸ್ವಲ್ಪ ಯೋಚನೆ ಮಾಡಿ, ಸಭಾ ನಾಯಕರು ಮುಖ್ಯಮಂತ್ರಿಯಾದ ಮೇಲೆ ಮೊದಲನೆ ಬಾರಿಗೆ ಅವರಿಗೆ ಸಂಬಂಧಪಟ್ಟ ಬೇಡಿಕೆ ಮೇಲೆ ಉತ್ತರ ಕೊಡಲು ನಿಂತಿದ್ದಾರೆ. ಎಲ್ಲಾ ವಿಚಾರಗಳನ್ನು ಸಾಕಷ್ಟು ಸುದೀರ್ಘವಾಗಿ ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಕೆಲವು ವಿಚಾರಗಳಲ್ಲಿ ಅಭಿಪ್ರಾಯ ಭೇದ ಬರತಕ್ಕಂಥಾದ್ದು ಸಹಜ. ಅವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ತಾವುಗಳು ಧರಣಿ ಮಾಡತಕ್ಕಂಥ ತೀವ್ರವಾದ ಸನ್ನಿವೇಶ ಏನೂ ಬಂದಿಲ್ಲ. ಸೌಜನ್ಯದ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯ ಮಾಡಿ ತಾವು ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಆಯಿತು, ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಾಟಾಳ್ ನಾಗರಾಜ್‌ರವರು, ಕೆ.ಸಿ.ಪಿ. ಪಕ್ಷದ ಸದಸ್ಯರುಗಳು, ಹಾಗೂ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಮಾನ್ಯ ಸದಸ್ಯರುಗಳಾದ ಶ್ರೀ ಪ್ರತಾಪ ಚಂದ್ರ ಶೆಟ್ಟಿ ಮತ್ತು ರಮಾನಾಥ ರೈ ಅವರ ಒಂದು ಗಮನ ಸೆಳೆಯುವ ಸೂಚನೆ ನಿನ್ನೆ ದಿವಸವೇ ಕೈ ಬಿಟ್ಟು ಹೋಗಿತ್ತು. ಇವತ್ತು ಅದನ್ನು ಹಾಕಲಾಗಿದೆ. ಅದನ್ನು ಮುಗಿಸಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:- ಆಶ್ರಯ ಅಂಬೇಡ್ಕರ್ ಹಾಗೂ ನೆರಳಿನ ಭಾಗ್ಯ ಯೋಜನೆಗಳ ಫಲಾನುಭವಿಗಳ ಆಯ್ಕೆ.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ಆಶ್ರಯ, ಅಂಬೇಡ್ಕರ್, ನೆರಳಿನ ಭಾಗ್ಯ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ತಾಲ್ಲೂಕು ಪಂಚಾಯಿತಿ ಸಮಿತಿಗಳು ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸದಿರುವ ಬಗ್ಗೆ ಮಾನ್ಯ ವಸತಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.